(ಳ) ಮೆ।। ಡಿ. ರಂಗನಾಥನ್, ಖಾಸಬಾಗ್, ಖಣೆ ಬಜಾರ್, ಬೆಳಗಾಂ–೩

(ಱ) ಮೆ।। ಜೆ. ಜೆ. ಎಂಟರ್ ಪ್ರೈಸಸ್, ೩೦೬, ೭ನೇ 'ಸಿ' ಮೈನ್, ಜಯನಗರ, ಬೆಂಗಳೂರು–೧೧

(೬) ಎಲ್. ಕೆ. ಸಾಂಗ್ಲೀಕರ್ ಮಾರ್ಕೆಟ್, ಧಾರವಾಡ

ಬೆಳಗಾವಿ : (೧) ಮೆ।। ಡಿ. ರಂಗನಾಥನ್, ಶಾಹಪುರ, ಬೆಳಗಾಂ.

ಮೇಲೆ ನಮೂದಿಸಿರುವ ವಿವರಣೆಗಳು ೧೯೮೨–೮೩ನೇ ಸಾಲಿಗೆ ಸಂಬಧಪಟ್ಟದ್ದು.

ಗಂಗಾವತಿಯ ಸರ್ಕಾರಿ ಕಿರಿಯ ಕಾಲೇಜಿಗೆ ಬೇಕಾದ ಸೌಲಭ್ಯಗಳ ಬಗ್ಗೆ

೧೫೬೬ (೮೧) ಶ್ರೀ ಹೆಚ್. ಎಸ್. ಮುರಳಿಧರ್ (ಗಂಗಾವತಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಗಂಗಾವತಿಯ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಪ್ರೌಢಶಾಲೆ ತರಗತಿಗಳು ಪಾಳಿ ಪ್ರಕಾರ ನಡೆಯುತ್ತಿದ್ದು ಸಾಕಷ್ಟು ಸ್ಥಳಾವಕಾಶ ಇಲ್ಲದಿರುವುದರಿಂದ ಹೆಚ್ಚಿನ ಕೊಠಡಿಗಳು ಮತ್ತು ಒಂದು ಸಭಾಂಗಣ ಅತ್ಯಪಶ್ಯಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

(ಆ) ಸದರಿ ಕಾಲೇಜಿಗೆ ಸೌಕರ್ಯಗಳು, ಪ್ರಯೋಗಶಾಲೆ ಸಲಕರಣೆಗಳು, ಗ್ರಂಥಾಲಯ, ಆಸನಗಳು ಮತ್ತು ಬೋಧಿಸುವ ಸಲಕರಣೆಗಳು ಅತ್ಯವಶ್ಯಕವೆಂದು ಸರ್ಕಾರ ಗಮನಿಸಿದೆಯೆ ;

(ಇ) 'ಆ'ನಲ್ಲಿ ಹೇಳಿರುವಂತೆ ಹೆಚ್ಚಿನ ಕೊಠಡಿಗಳನ್ನು ಒಂದು ಸಭಾಂಗಣವನ್ನು ಮತ್ತು ಸಲಕರಣೆಗಳನ್ನು ಒದಗಿಸಲು ಕೂಡಲೇ ಕ್ರಮ ತೆಗೆದುಕೊಳ್ಳಲು ಸರ್ಕಾರ ಇಚ್ಚಿಸುತ್ತದೆಯೇ ?

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು).—

(ಅ) ಹೌದು

(ಆ) ಹೌದು

(ಇ) ೧೯೮೪–೮೫ರಲ್ಲಿ ಹೆಚ್ಚಿನ ಕೊಠಡಿಗಳನ್ನು ಹಾಗೂ ಉಳಿದ ಸೌಲಭ್ಯಗಳನ್ನು ಒದಗಿಸುವುದಕ್ಕೆ ಪ್ರಯತ್ನಗಳನ್ನು ಮಾಡಲಾಗುವುದು.

ರಾಜ್ಯದಲ್ಲಿರುವ ಕಾಲೇಜುಗಳಲ್ಲಿ ಬೋಧಕ ಸಿಬ್ಬಂದಿಗಳನ್ನು ಭರ್ತಿಮಾಡುವ ಬಗೆ

೧೫೬೭ (೮೫೭) ಶ್ರೀ ಕೆ. ಹೆಚ್. ರಂಗನಾಥ್ (ಹಿರಿಯೂರು).—ಮಾನ್ಯ ಶಿಕ್ಷಣ ಮಂತ್ರಿಗಳೆ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

(ಅ) ರಾಜ್ಯದಲ್ಲಿರುವ ಕಿರಿಯ ಮತ್ತು ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ, ಮಂಜೂರಾದ ಎಲ್ಲಾ ವರ್ಗಗಳಲ್ಲಿ ಉಪನ್ಯಾಸಕರು, ರೀಡರುಗಳು ಮತ್ತು ಪ್ರಾಧ್ಯಾಪಕರುಗಳು ಮತ್ತು ಈಗ ಕೆಲಸ ಮಾಡುತ್ತಿರುವ ಸಿಬ್ಬಂದಿ

(ಆ) ಕೊರತೆ ಇರುವ ಉಪನ್ಯಾಸಕರು ರೀಡರ್ಸ್ ಮತ್ತು ಪ್ರಾಧ್ಯಾಪಕರುಗಳು ಇದ್ದಲ್ಲಿ ಎಂದಿನಿಂದ ಮತ್ತು ಈ ಬಗ್ಗೆ ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮ ;

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು).—

(ಅ) ೧) ೨೯೦ ಸರ್ಕಾರಿ ಕಿರಿಯ ಕಾಲೇಜುಗಳು.

೨) ೪೫ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು.

ಹುದ್ದೆಗಳ ಪದನಾಮ	ಮಂಜೂರಾದ ಹುದ್ದೆಗಳು	ಭರ್ತಿ ಮಾಡಿದ ಹುದ್ದೆಗಳು
೧. ಉಪನ್ಯಾಸಕರು	೨೪೧೬	೨೦೩೯
೨. ಪ್ರೊಫೆಸರ್‌ಗಳು	೮೧	೫೨
ರೀಡರ್‌ಗಳು	೨೫೪	೧೦೮
ಉಪನ್ಯಾಸಕರು	೧೪೩೮	೧೧೭೧

(ಅ) ಜೇಷ್ಠತಾ ಪಟ್ಟಿಯನ್ನು ಆಕೈರಾಗಿ ನಿರ್ಣಯಿಸಿದ (ಪೈನ್‌ಲೈಜ್) ಬಳಿಕ ಪ್ರಾಚಾರ್ಯರ ಮತ್ತು ಪ್ರಾಧ್ಯಾಪಕರ ಹುದ್ದೆಗಳನ್ನು ತುಂಬಲಾಗುವುದು. ಲೋಕಸೇವಾ ಆಯೋಗದಿಂದ ಉಪನ್ಯಾಸಕರ ಹುದ್ದೆಗಳನ್ನು ಪೂರ್ಣವಾಗಿ ತುಂಬಲು ತಡವಾದ್ದರಿಂದ ಉಪನ್ಯಾಸಕರ ಹುದ್ದೆಗಳನ್ನು ಕಾಂಟ್ರಕ್ಟ್ ಆದಾರದ ಮೇಲೆ ತುಂಬಲು ಪರಿಶೀಲಿಸಲಾಗುತ್ತಿದೆ.

ಬೀದರ್ ಜಿಲ್ಲೆಯಲ್ಲಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದು

೧೫೮ (೨೪) ಶ್ರೀ ಭೀಮಣ್ಣ ಖಂಡ್ರೆ (ಬಾಲ್ಕಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಒಟ್ಟು ಪ್ರೌಢಶಾಲೆಗಳು ಪ್ರಾಥಮಿಕ ಶಾಲೆಗಳು ಹಿರಿಯ ಪ್ರಾಥಮಿಕ ಶಾಲೆಗಳು (ಮಾಧ್ಯಮಿಕ) ಎಷ್ಟು? (ಜಿಲ್ಲಾವಾರು ಸಂಖ್ಯೆ ಕೊಡತಕ್ಕದ್ದು)

ಆ) ಈ ಶಾಲೆಗಳಲ್ಲಿರುವ ಶಿಕ್ಷಕರ ಹುದ್ದೆಗಳು ಎಷ್ಟು? (ಜಿಲ್ಲಾವಾರು ಸಂಖ್ಯೆ ಕೊಡುವುದು)

ಇ) ಈ ಶಾಲೆಗಳಲ್ಲಿರುವ ಶಿಕ್ಷಕರ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು?

ಈ) ಈ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ೧) ಪ್ರೌಢಶಾಲೆಗಳು 3181

೨) ಪ್ರಾಥಮಿಕ ಶಾಲೆಗಳು ಹಿರಿಯ ಪ್ರಾಥಮಿಕ ಶಾಲೆ (ಮಾಧ್ಯಮಿಕ) 36356

ಜಿಲ್ಲಾವಾರು ವಿವರಣೆಯನ್ನು ಅನುಬಂಧ 'ಎ'ನಲ್ಲಿ ಕೊಡಲಾಗಿದೆ.

ಆ) ೧) ಪ್ರೌಢಶಾಲೆಗಳು 10180

೨) ಪ್ರಾಥಮಿಕ ಶಾಲೆಗಳು ಹಿರಿಯ ಪ್ರಾಥಮಿಕ ಶಾಲೆ (ಮಾಧ್ಯಮಿಕ) 101052
(ಸರ್ಕಾರಿ ಶಾಲೆಗಳ ಬಗ್ಗೆ ಮಾತ್ರ)

(ಜಿಲ್ಲಾವಾರು ಸಂಖ್ಯೆಯನ್ನು ಅನುಬಂಧ 'ಬಿ'ನಲ್ಲಿ ಕೊಡಲಾಗಿದೆ)